ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :—

ಅ) ಮಹಾನಗರ ಪಾಲಿಕೆಯ ನೂತನ ಪ್ರದೇಶಗಳಿಗೆ ಒಳಚರಂಡಿ ವಿಸ್ತರಣೆಯನ್ನು ಕೈಗೊಳ್ಳುವ ಪ್ರಸ್ತಾವನೆಯು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಕರ್ನಾಟಕ ತೀರ ಪ್ರದೇಶ ಪರಿಸರ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೆ.ಯು.ಐ.ಡಿ.ಎಫ್.ಸಿ.ಗೆ ಸಲ್ಲಿಸಲಾಗಿರುತ್ತದೆ. ಸದರಿ ಯೋಜನೆಯನ್ನು ಏಷ್ಯನ್ ಅಭಿವೃದ್ಧಿ ಬ್ಯಾಂಕಿನ ಸಹಾಯದೊಂದಿಗೆ ಕೈಗೊಳ್ಳಲಾಗುವುದು.

ಆ) ಅಂದಾಜು 32 ಕೋಟಿ ರೂಪಾಯಿಗಳು. ಯೋಜನೆಯು ಪರಿಶೀಲನಾ ಹಂತದಲ್ಲಿರುವುದರಿಂದ ನಿರ್ದಿಷ್ಟವಾದ ಸಂಪೂರ್ಣಗೊಳಿಸುವ ಸಮಯ ನಿಗಧಿಯಾಗಿರುವುದಿಲ್ಲ.

ಅಧ್ಯಕ್ಷರು :— ಮಂಡಿಸಲಾಯಿತು.

2) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಶ್ರೀ ಕೆ.ಎಸ್. ಈಶ್ವರಪ್ಪ :— ಮಾನ್ಯ ಅಧ್ಯಕ್ಷರೆ, ನಾನು ನಿಲುವಳಿ ಸೂಚನೆಯ ಬಗ್ಗೆ.....

ಅಧ್ಯಕ್ಷರು :— ಆ ವಿಷಯವನ್ನು ನಿಲುವಳಿ ಸೂಚನೆಯಲ್ಲಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಅದನ್ನು ಇವತ್ತೇ ಚರ್ಚೆಗೆ ತೆಗೆದುಕೊಳ್ಳೋಣ, ನಿಲುವಳಿ ಸೂಚನೆಯಲ್ಲಿ ಬೇಡ. ನೀವು ಒಂದೆರಡು ಕ್ಲಾರಿಫಿಕೇಶನ್ ಕೇಳಲು ಅವಕಾಶ ಮಾಡಿಕೊಡಬೇಕಾಗುತ್ತದೆ. ಇದನ್ನು ಮುಂದೆ ತೆಗೆದುಕೊಳ್ಳೋಣ. ಈಗ ಶೂನ್ಯವೇಳೆಯನ್ನು ತೆಗೆದುಕೊಳ್ಳೋಣ.

ಶ್ರೀ ಕೆ. ಜಯರಾಮಶೆಟ್ಟಿ :— ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ಮಂಗಳೂರಿನಲ್ಲಿ ಮನೆ, ನಿವೇಶನಗಳ ಹಕ್ಕು ಪತ್ರಗಳ ಬಗ್ಗೆ ಪ್ರಸ್ತಾಪ ಮಾಡಿದ್ದೆ, ಅದಕ್ಕೆ ಇವತ್ತು ಉತ್ತರ ಕೊಡಿಸುತ್ತೇನೆಂದು ಹೇಳಿದ್ದೀರಿ.

ಅಧ್ಯಕ್ಷರು :— ಇವತ್ತು ನಿಮ್ಮ ನೋಟೀಸ್ ಇರುವಂಥಾದ್ದು ಗಡಿನಾಡ ಕನ್ನಡಿಗರಿಗೆ ಪ್ರೋತ್ಸಾಹ ಕೊಡುವ ಬಗ್ಗೆ.

(ಅ) ಗಡಿನಾಡಿನ ಕನ್ನಡಿಗರಿಗೆ ಅಧ್ಯಾಪಕರ ಹುದ್ದೆಗೆ ಸಿಂಧುತ್ವ ಪತ್ರ ನೀಡುವ ಬಗ್ಗೆ.

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) :— ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸರ್ಕಾರ ಕಾಸರಗೋಡಿನ ಕನ್ನಡಿಗರಿಗೆ ಪ್ರೊತ್ಸಾಹ ಕೊಡುತ್ತೇವೆಂದು ಬಹಳಷ್ಟು ಕಾರ್ಯಕ್ರಮವನ್ನು ಹಾಕುತ್ತೇವೆಂದು ಭರವಸೆ ಕೊಟ್ಟರು. ಕಳೆದ 6 ತಿಂಗಳ ಕೆಳಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾಥಮಿಕ ಶಿಕ್ಷಕರ ಆಯ್ಕೆಯ ಸಂದರ್ಭದಲ್ಲಿ ಕಾಸರಗೋಡಿನ ಕನ್ನಡಿಗರು ಪ್ರಾಥಮಿಕ

ಶಿಕ್ಷಕರ ಹುದ್ದೆಗೆ ಅರ್ಜಿಯನ್ನು ಹಾಕಿದರು. ಅದರಲ್ಲಿ ಎಂಟು ಮಂದಿ ಹಿಂದುಳಿದ ವರ್ಗದವರು ಆಯ್ಕೆಯಾಗಿದ್ದಾರೆ. ಆ ಎಂಟು ಮಂದಿ ನನ್ನ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಎರಡು ವರ್ಷಗಳಿಂದ ವಾಸ್ತವ್ಯ ಹೂಡಿದ್ದಾರೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳು ಪ್ರಮಾಣ ಸಿಂಧುತ್ವ ಪತ್ರವನ್ನು ಕೊಡುವುದಕ್ಕೆ ಅವರ ತಂದೆ ತಾಯಿಗಳು ಕೇರಳದಲ್ಲಿರುವುದರಿಂದ ಅದನ್ನು ರಿಜೆಕ್ಟ್ ಮಾಡಿದ್ದಾರೆ. ನಾವು ಜಿಲ್ಲೆಯ ಕೆ.ಡಿ.ಪಿ. ಸಭೆಯಲ್ಲಿ ಈ ವಿಚಾರವಾಗಿ ಉಸ್ತುವಾರಿ ಮಂತ್ರಿಗಳ ಜೊತೆಗೆ ಚರ್ಚೆ ಮಾಡಿ ಈ ಎಂಟು ಜನರಿಗೆ ವಿಶೇಷ ವ್ಯವಸ್ಥೆ ಮಾಡಿ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿದ್ದರೂ ಕೂಡ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದನ್ನು ವಿಶೇಷ ರೀತಿಯಲ್ಲಿ ಪರಿಗಣನೆಗೆ ತೆಗೆದುಕೊಂಡು ಈ ಎಂಟು ಜನರಿಗೆ ಅಧ್ಯಾಪಕರ ಹುದ್ದೆಗೆ ಸಿಂಧುತ್ವ ಪತ್ರವನ್ನು ಕೊಟ್ಟು ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ರಾಜ್ಯಸರ್ಕಾರ ನಿರ್ದೇಶನ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎ. ಮೊಯ್ದೀನ್ :— ಮಾನ್ಯ ಅಧ್ಯಕ್ಷರೆ, ಇದರಲ್ಲಿ ಒಂದು ಜಿಜ್ಞಾಸೆ ಇದೆ. ಇವರು ಕರ್ನಾಟಕದವಲ್ಲ, ಹೊರಗಿನ ಕಾಸರಗೋಡಿನವರೆನ್ನುವಂತಹ ವಿಚಾರವಿದೆ. ಈ ರೀತಿಯಾಗಿ ಡೆಪ್ಯೂಟಿ ಕಮೀಷನರ್‌ರವರು ನಿರ್ಧಾರಕ್ಕೆ ಬಂದಿದ್ದಾರೆ. ಈಗ ಇವರ ಅಪೀಲು ಡಿವಿಜನಲ್ ಕಮೀಷನರ್ ಹತ್ತಿರ ಹೋಗಿದೆ. ಅಲ್ಲಿ ಅವರ ಜಡ್ಜ್‌ಮೆಂಟ್ ಏನಾಗುತ್ತದೆಂದು ನೋಡಿಕೊಂಡು ಅದರ ಆಧಾರದ ಮೇಲೆ ನಾವು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕೆ. ಜಯರಾಮಶೆಟ್ಟಿ :— ಇದು ಕಾನೂನಿಗೆ ಸಂಬಂಧಪಟ್ಟಂತಹ ವಿಚಾರವಾಯಿತು. ನಾನು ರಾಜ್ಯಸರ್ಕಾರದಲ್ಲಿ ವಿಶೇಷ ವ್ಯವಸ್ಥೆ ಮಾಡಿ ಇವರನ್ನು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಹ್ಯಾಮ್ಲೆಟ್ ಯೋಜನೆಯಡಿಯಲ್ಲಿ ವಿದ್ಯುದ್ದೀಕರಣ ಕಾಮಗಾರಿ.

ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) :— ಮಾನ್ಯ ಅಧ್ಯಕ್ಷರೆ, ಹ್ಯಾಮ್ಲೆಟ್ ಸ್ಕೀಂನಲ್ಲಿ ಯಾವುದಾದರೂ ಗ್ರಾಮವನ್ನು ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಯಾವ ಆದ್ಯತೆಯ ಮೇಲೆ ಸರ್ಕಾರ ತೆಗೆದುಕೊಳ್ಳುತ್ತದೆಂಬ ಬಗ್ಗೆ ಗೊತ್ತಾಗುತ್ತಿಲ್ಲ. ಈ ಇಲಾಖೆಯ ಇಂಜಿನಿಯರ್‌ಗಳಿಂದ ಅಲ್ಲಿನ ಪರಿಸ್ಥಿತಿಯನ್ನು ಅಧ್ಯಯನ ಮಾಡಿಸಿ ಇಂಥಾದ್ದನ್ನು ಪ್ರಾರಂಭಿಕ ಹಂತದಲ್ಲಿ ತೆಗೆದುಕೊಳ್ಳಬೇಕೆಂದು ಹೇಳಿದ್ದರೂ ಕೂಡ ಅದನ್ನು ತೆಗೆದುಕೊಳ್ಳದೆ, ಯಾರಾದರೂ ಒತ್ತಡ ಹಾಕಿದರೆ ಅದನ್ನು ತೆಗೆದುಕೊಳ್ಳುವಂಥಾದ್ದು ಇದೆ. ಈಗ ಹ್ಯಾಮ್ಲೆಟ್ ಸ್ಕೀಂನಲ್ಲಿ ವಿದ್ಯುದ್ದೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದರಲ್ಲಿ ಆದ್ಯತೆ ನೀಡುವ ಬಗ್ಗೆ ಕಾರ್ಯಕಾರಿ ಅಭಿಯಂತರರು, ಮಂಗಳೂರು, ಇವರು ದಿ: 4-5-98 ರಲ್ಲಿ ಕಾಪ್ರಾಡಿ ಗ್ರಾಮದ ಅರಂಗಳ್ಯೆಲು,